# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 901 |
| ಸದಸ್ಯರ ಹೆಸರು | : ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : 12.03.2020 |
| ಉತ್ತರಿಸುವ ಸಚಿವರು | : ಜಲ ಸಂಪನ್ಮೂಲ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆಗಳು</th><th>ಉತ್ತರಗಳು</th></tr>
<tr><td>ಅ)</td><td>ಬೀದರ್ ಜಿಲ್ಲೆ ಮಾಂಜ್ರಾ ಸರಣಿ ಬ್ಯಾರೇಜ್‌ಗಳಲ್ಲಿ ಗೇಟ್ ಸಮಸ್ಯೆಯಾಗಿ ನೀರು ನಿಲ್ಲದಿರುವ ಬಗ್ಗೆ ತನಿಖೆಗೆ ಹೈಕೋರ್ಟ್ ಆದೇಶಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿಅದರ ವಿವರ ನೀಡುವುದು;</td><td>ಬೀದರ ಜಿಲ್ಲೆಯ ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಿದ 4 ಸರಣಿ ಬ್ಯಾರೇಜ್‌ಗಳಲ್ಲಿ ಅಳವಡಿಸಿದ ಗೇಟುಗಳ ಸಮಸ್ಯೆಯಾಗಿ ನೀರು ನಿಲ್ಲದಿರುವ ಬಗ್ಗೆ ಶ್ರೀ ಗುರುನಾಥ ವಡ್ಡೆ, ಇವರು ಹೂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಡಬ್ಲ್ಯೂ.ಪಿ ಸಂ.15937/2019) ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ದಿ:27.06.2019 ರಂದು ವಿಚಾರಣೆ ನಡೆಸಿ ಅಧೀಕ್ಷಕ ಅಭಿಯಂತರರು, ಕೃಭಾಜನಿನಿ. ಜೆಬಿಸಿ. ವೃತ್ತ, ಭೀಮರಾಯನಗುಡಿ ರವರ ತಪಾಸಣಾ ವರದಿಯನ್ನು ಅಂಗೀಕರಿಸಿ ಪ್ರಕರಣವನ್ನು ಇತ್ಯರ್ಥಗೊಳಿಸಿ ಅರ್ಜಿಯನ್ನು ವಜಾಗೊಳಿಸಿ ಆದೇಶ ಹೊರಡಿಸಿದೆ.</td></tr>
<tr><td>ಆ)</td><td>04 ಬ್ಯಾರೇಜ್‌ಗಳ ನಿರ್ಮಾಣಕ್ಕೆ ಖರ್ಚು ಮಾಡಲಾಗಿರುವ ಹಣವೆಷ್ಟು; ಮತ್ತು ಯಾವ ವರ್ಷದಲ್ಲಿ ಬ್ಯಾರೇಜ್ ಗಳನ್ನು ನಿರ್ಮಾಣ ಮಾಡಲಾಗಿದೆ.</td><td>ಮಾಂಜ್ರಾ ನದಿ ಪಾತ್ರದಡಿ ಕೃಷ್ಣಾ ಭಾಗ್ಯ ಜಲ ನಿಗಮದ ವತಿಯಿಂದ 4 ಸರಣಿ ಬ್ಯಾರೇಜ್ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದ್ದು, ವಿವರಗಳು ಈ ಕೆಳಗಿನಂತಿವೆ;
<table>
<tr><th>ಕ್ರ ಸಂ</th><th>ಯೋಜನೆ ಹೆಸರು</th><th>ನಿರ್ಮಾಣದ ವೆಚ್ಚ (ರೂ.ಕೋಟಿ ಗಳಲ್ಲಿ)</th><th>ಪೂರ್ಣ ಗೊಂಡ ವರ್ಷ</th></tr>
<tr><td>1</td><td>ಜೀರಗಿಹಾಳ ಬ್ರಿಡ್ಜ್ ಕಂ ಬ್ಯಾರೇಜ್</td><td>63.22</td><td>2014</td></tr>
<tr><td>2</td><td>ಮಾಣಿಕೇಶ್ವರ ಬ್ರಿಡ್ಜ್ ಕಂ ಬ್ಯಾರೇಜ್</td><td>57.47</td><td>2012</td></tr>
<tr><td>3</td><td>ಹಾಲಹಳ್ಳಿ ಬ್ರಿಡ್ಜ್ ಕಂ ಬ್ಯಾರೇಜ್</td><td>105.63</td><td>2013</td></tr>
<tr><td>4</td><td>ಚಂದಾಪುರ ಬ್ರಿಡ್ಜ್ ಕಂ ಬ್ಯಾರೇಜ್</td><td>60.94</td><td>2011</td></tr>
<tr><td></td><td>ಒಟ್ಟು</td><td>287.26</td><td></td></tr>
</table></td></tr>
<tr><td>ಇ)</td><td>ಈ ಸರಣಿ ಬ್ಯಾರೇಜ್‌ಗಳ ನಿರ್ಮಾಣದಿಂದ ಒಟ್ಟು ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.; (ಸಂಪೂರ್ಣ ವಿವರ ನೀಡುವುದು)</td><td>ಮೇಲ್ಕಂಡ 4 ಸರಣಿ ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿಗಳನ್ನು ಈಗಾಗಲೇ ಪೂರ್ಣಗೊಳಿಸಲಾಗಿದ್ದು, ಸದರಿ ಬ್ಯಾರೇಜುಗಳಡಿ ಶೇಖರಣೆಯಾಗುವ ಹಿನ್ನೀರನ್ನು ರೈತರು ತಮ್ಮ ಸ್ವಂತ ಪಂಪ್‌ಸೆಟ್ ಅಳವಡಿಸಿಕೊಂಡು ನೀರಾವರಿಗೆ ಬಳಸಿಕೊಳ್ಳುವುದಾಗಿರುತ್ತದೆ.</td></tr>
<tr><td>ಈ)</td><td>ನೂರಾರು ಕೋಟಿ ರೂಪಾಯಿ ವೆಚ್ಚ ಮಾಡಿ ನಿರ್ಮಾಣ ಮಾಡಲಾದ ಯೋಜನೆಯಲ್ಲಿ ಅಕ್ರಮ ಮತ್ತು ಲೋಪದೋಷಗಳು ಉಂಟಾಗಲು ಕಾರಣವೇನು; ಇದಕ್ಕೆ ಕಾರಣರಾದವರುಗಳ ವಿರುಧ್ಧ ಯಾವ ಕ್ರಮ ಕೈಗೊಳ್ಳಲಾಗುವುದು;</td><td>2016 ನೇ ಸಾಲಿನಲ್ಲಿ ಉಂಟಾದ ಪ್ರವಾಹ ಸಮಯದಲ್ಲಿ ಕೆಲವು ಗೇಟುಗಳು ಸ್ವಲ್ಪ ಪ್ರಮಾಣದಲ್ಲಿ ಹಾನಿಗೊಳಗಾಗಿದ್ದು 2017ನೇ ಸಾಲಿನಲ್ಲಿ ಮೂಲ ಗುತ್ತಿಗೆದಾರರಿಂದ ದುರಸ್ತಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಇದರಿಂದ, ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟವಿಲ್ಲದೆ ದುರಸ್ತಿಗೊಳಿಸಲಾಗಿರುತ್ತದೆ. ಈ ಬ್ಯಾರೇಜುಗಳಿಗೆ ಅಳವಡಿಸಲಾದ ಗೋಡಬೋಲೆ ಗೇಟುಗಳಲ್ಲಿ ಯಾವುದೇ ದೋಷ ಕಂಡು ಬಂದಿರುವುದಿಲ್ಲ. ಆದ್ದರಿಂದ, ಗುತ್ತಿಗೆದಾರರು ಮತ್ತು</td></tr>
</table>

| ಕ್ರ ಸಂ | ಪ್ರಶ್ನೆಗಳು | ಉತ್ತರಗಳು |
| --- | --- | --- |
| | (ಸಂಪೂರ್ಣ ಮಾಹಿತಿ ನೀಡುವುದು) | ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡಿರುವುದಿಲ್ಲ. |
| ಉ) | ಕೂಡಲೇ 4 ಬ್ಯಾರೇಜ್‌ಗಳ ಗೇಟಗಳನ್ನು ಸರಿಪಡಿಸಿ ರೈತರಿಗೆ ನೀರು ಸರಬರಾಜು ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ಸದರಿ 4 ಬ್ಯಾರೇಜುಗಳಡಿ ಸ್ಥಳೀಯ ಹಾಗೂ ತಾಂತ್ರಿಕ ಅವಶ್ಯಕತೆಗಳಿಗೆ ಅನುಗುಣವಾಗಿ ಬ್ಯಾರೇಜುಗಳಡಿ ಅಳವಡಿಸಿದ ಗೋಡಬೊಲೆ ಗೇಟುಗಳಿಗೆ Low Level Friction Dampers ಅಳವಡಿಸುವ ಒಟ್ಟು ರೂ.7.07 ಕೋಟಿ ಗುತ್ತಿಗೆ ಮೊತ್ತದ ಎರಡು ಪ್ಯಾಕೇಜ್ ಕಾಮಗಾರಿಗಳನ್ನು ಮಾರ್ಚ 2018 ರಲ್ಲಿ ಕೈಗೆತ್ತಿಕೊಂಡಿದ್ದು ಪ್ರಸ್ತುತ ಕಾಮಗಾರಿಗಳು ಪೂರ್ಣಗೊಳಿಸಿ ಬ್ಯಾರೇಜ್‌ಗಳಡಿ ನೀರು ಸಂಗ್ರಹಿಸಲಾಗಿದೆ. |

ಸಂಖ್ಯೆ: ಜಸಂಇ 21 ಡಬ್ಲ್ಯೂಬಿಎಂ 2020

(ರಮೇಶ್ ಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು